## ೨ ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು.

ಸಿ.ಸಿ. ನಂ.915/2022

ಪಿಡಬ್ಲ್ಯೂಃ 1 ಸಿ.ಡಬ್ಲೂಃ 8

| | |
|---|---|
| ಸಾಕ್ಷಿದಾರನ ಹೆಸರು | ಚಂದನ್ ಕಾಳೇ |
| ತಂದೆಯ ಹೆಸರು | ಶಾಮ್ ರಾವ್ ಕಾಳೇ |
| ವಯಸ್ಸು | 32 ವರ್ಷ |
| ಕೆಲಸ | ಪಿಎಸ್ಐ., ಕೆ ಜಿ ನಗರ ಪೊಲೀಸ್ ಠಾಣೆ |
| ವಾಸ | ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕಃ 16.02.2024 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಮಾರ್ಚ್ 2019 ರಿಂದ ಜನವರಿ 2020 ರವರೆಗೆ ಜಯನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 21.08.2021 ರಂದು ಚಾಸಾ.1 ರವರು ಒಂದು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಪ್ರ.ವ.ವ.ಅನ್ನು ದಾಖಲಿಸಿ ಮೇಲಾಧಿಕಾರಿಗಳಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಪ್ರ.ವ.ವ.ಅನ್ನು ನಿಪಿ.2 ಮತ್ತು ಸಹಿಯನ್ನು ನಿಪಿ.2 ಎಂದು ಗುರುತಿಸಲಾಯಿತು. ನಂತರ ಪಂಚರನ್ನು ಬರಮಾಡಿಕೊಂಡು ಸಿಬ್ಬಂದಿಗಳೊಂದಿಗೆ ಪೇಮಸ್ ಟೆಲಿಕಾಂ ಅಂಗಡಿಗೆ ತೆರಳಿ ಬಂದಿರುವ ವಿಚಾರ ತಿಳಿಸಿ ತನಿಖೆಗೆ ಸಹಕರಿಸಬೇಕಾಗಿ ಕೋರಿದ್ದು, ಮೊಹಮದ್ ಅನಿಫ್ ಎನ್ನುವವರು ಇದ್ದು, ಪಂಚರು ಸಿಬ್ಬಂದಿಗಳ ಸಮಕ್ಷಮ ಅಂಗಡಿ ಪರಿಶೋಧನೆ ಮಾಡಿದಾಗ ಆಪಲ್ ಕಂಪನಿಯ ನಕಲಿ ಮೊಬೈಲ್ ಬ್ಯಾಕ್ ಕೇಸ್ ಕವರ್ ಗಳು ಸಿಕ್ಕವು. ಅವುಗಳು ನಕಲಿ ಎಂದು ಚಾಸಾ.1 ರವರು ಗುರುತಿಸಿದ್ದರು. ಆದ್ದರಿಂದ ಅವುಗಳನ್ನು ಪಂಚರು ಸಮಕ್ಷಮ ಪಂಚನಾಮೆ ಬರೆದು ಅಮಾನತುಪಡಿಸಿಕೊಂಡೆನು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಆರೋಪಿ ಮತ್ತು ಮಾಲು ನೊಂದಿಗೆ ಠಾಣೆಗೆ ಬಂದೆವು. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ನಿಯಾಮಾವಳಿಗಳನ್ನು ಪಾಲಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆನು. **(ಈ ಹಂತದಲ್ಲಿ ಸಾಕ್ಷಿಗೆ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಬಗ್ಗೆ ತಿಳುವಳಿಕೆ ನೀಡಿ ಇನ್ನೂ ಮುಂದೆ ಜಾಮೀನು ಅಲ್ಲದ ಪ್ರಕರಣಗಳಲ್ಲಿ ಆರೋಪಿಯನ್ನು ಠಾಣೆಯಲ್ಲಿ ಜಾಮೀನು ಪಡೆದು ಬಿಡಬಾರದಾಗಿ ಎಚ್ಚರಿಕ ನೀಡಿರುತ್ತದೆ).**

This is a True Copy of the Court Records Online. Authenticated @ districts.ecourtsindia.com/cnr/KABC030026822022/truecopy/order-2.pdf

www.ecourtsindia.com

ನಂತರ ಸ್ವತ್ತುಪಟ್ಟಿಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. ನಂತರ ಮಾದರಿಗಾಗಿ ತೆಗೆದಿದ್ದ ಮಾಲುಗಳನ್ನು ಗ್ರಿಫಿನ್ ಕಂಪನಿಯವರಿಗೆ ನೈಜತೆ ಪತ್ತೆ ಹಚ್ಚಿ ವರದಿ ನೀಡಬೇಕೆಂದು ಮನವಿ ಪತ್ರ ಕಳುಹಿಸಿಕೊಟ್ಟೆನು. ನಂತರ ಚಾಸಾ.1 ರವರು ಹಾಜರುಪಡಿಸಿದ ದಾಖಲಾತಿಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕ 15.07.2011 ರ ಬಾಡಿಗೆ ಕರಾರು ಪತ್ರವನ್ನು ಈಗ ನೋಡುತ್ತಿದ್ದು, ನಿಪಿ.4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಗ್ರಿಫಿನ್ ಕಂಪನಿಗೆ ಸಂಬಂಧಿಸಿದ ಅಧಿಕಾರ ಪತ್ರ, ಟ್ರೇಡ್ ಮಾರ್ಕ್ ಪ್ರಮಾಣ ಪತ್ರ, ಎಸ್ವಿಎ ಒಟ್ಟು 17 ಪುಟಗಳ ನೋಟರಿ ದೃಡೀಕೃತ ಪ್ರತಿಗಳನ್ನು ನಿಪಿ.5 ಎಂದು ಗುರುತಿಸಲಾಯಿತು. ನಂತರ ಪಂಚರು ಮತ್ತು ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಂಡೆನು. ಅದುವರೆಗಿನ ತನಿಖೆಯಿಂದ ಆರೋಪಿಯ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಸ್ವತ್ತುಪಟ್ಟಿ ಸಂ.158/21 ರಲ್ಲಿ ನಮೂದಿಸಿರುವ ಒಟ್ಟು 88 ಮೊಬೈಲ್ ಬ್ಯಾಕ್ ಕೇಸ್ ಕವರ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳೆಲ್ಲವನ್ನು ಒಟ್ಟಾಗಿ ಎಂಓ.1 ಎಂದು ಗುರುತಿಸಲಾಯಿತು. ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರಿಂದಃ

ಆರೋಪಿ ಅಂಗಡಿಯ ಅಕ್ಕಪಕ್ಕ ಬೇರೆ ಅಂಗಡಿಗಳು ಇದ್ದವು. ಠಾಣೆಯನ್ನು 3.45 ಗಂಟೆಗೆ ಬಿಟ್ಟು ಅಂಗಡಿಗೆ ಬಳಿ ಸುಮಾರು 4 ಗಂಟೆಗೆ ತಲುಪಿದೆವು. ಚಾಸಾ.1 ರವರು ಮಧ್ಯಾಹ್ನ 3 ಗಂಟೆಗೆ ದೂರು ಕೊಟ್ಟಿದ್ದರು. ಚಾಸಾ.1 ರವರನ್ನು ಜೊತೆಯಲ್ಲಿ ಕರೆದುಕೊಂಡು ಅಂಗಡಿಯ ಹತ್ತಿರ ಹೋದೆನು. ಚಾಸಾ.1 ರವರು ಅಲ್ಲಿಟ್ಟಿದ್ದ ಮಾಲುಗಳು ನಕಲಿ ಎಂದು ಗುರುತಿಸಿದರು. ಆರೋಪಿಯ ಅಂಗಡಿಯಲ್ಲಿ ಸಿಸಿಟಿವಿ ಇತ್ತೋ ಇಲ್ಲವೋ ನಾನು ನೋಡಿಲ್ಲ. ದಾಳಿ ಮಾಡಿರುವುದನ್ನು ನಾನು ಫೋಟೋ ತೆಗೆಸಿಲ್ಲ. ಫೋಟೋ ತೆಗೆಸಲು ತೊಂದರೆ ಇರಲಿಲ್ಲ. ನಿಪಿ.3 ರಲ್ಲಿ ಎಂಓ.1 ರ ಮೌಲ್ಯ ಎಷ್ಟೆಂದು ಮಾಡಿಲ್ಲ. ನೀವು ಆರೋಪಿಯ ಅಂಗಡಿಯಲ್ಲಿ ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಮುದ್ದೆಮಾಲನ್ನು ವಶಪಡಿಸಿಕೊಂಡಿಲ್ಲ. ಎಂಓ.1 ಮತ್ತು ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿಕೋಶಸ್ಥರ ಸುಳ್ಳು ಪ್ರಕರಣ ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ನೀವು ಹೇಳಿರುವಂತೆ ನಿಪಿ.3 ನ್ನು ಆರೋಪಿಯ ಅಂಗಡಿಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC030026822022/truecopy/order-2.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇ.

9 ನೇ ಅ. ಮು. ಮ. ದಂ.

This is a True Copy of the Court Records Online. Authenticated @ districts.ecourtsindia.com/cnr/KABC030026822022/truecopy/order-2.pdf